

# ಧವಳಕೇಶವೆಂಬ ದಿವ್ಯ ಸಂಕೇತ

ಬಿಳಿಕೂದಲು, ಬೆಳ್ಳಿ ಕೂದಲು, ಸಾಲ್ಟ್ ಅಂಡ್ ಪೆಪ್ಪರ್... ಇಂತಹ ಕೇಶವೀಗ ಫ್ಯಾಷನ್ ದರ್ಶನವಷ್ಟೇ ಅಲ್ಲ, ಕೋವಿಡ್ ನಂತರ ಅದೊಂದು ಮುಕ್ತಿ ಮಾರ್ಗದ ಸಂಕೇತವೂ ಆಗಿ ಬದಲಾಗಿದೆ.

■ ಎನ್ವಿ

ಸಲೂನ್ ಶಾಪಿನ ಭವ್ಯವಾದ ಕುರ್ಚಿ ಮೇಲೆ ಕುಳಿತ ವ್ಯಕ್ತಿ, 'ಕುವೆಂಪು ಸ್ಟೈಲ್‌ನಲ್ಲಿ ಕರ್ಲ್ ಮಾಡಪ್ಪ' ಅಂದಾಗ, ಹೇರ್‌ಕಟ್ ಮಾಡುವವ ನಿರುತ್ತರ. ಉತ್ತರ ಪ್ರದೇಶದ ಆತನಿಗೆ ಕುವೆಂಪು ಹೇಗೆ ಗೊತ್ತಾಗಬೇಕು. ಮೊಬೈಲ್ ಪರದೆಯಲ್ಲಿ ಕುವೆಂಪು ಪಟವನ್ನು ತೋರಿಸಿದ ಮೇಲೆ ಅವನ ಮುಖದಲ್ಲೊಂದು ನಗೆ. ಆ ರೀತಿ ಮಾಡಲು ಸಾಧ್ಯವಿಲ್ಲ ಎಂದು ತನ್ನ ಹಿಂದಿ ಭಾಷೆಯಲ್ಲೇ ಅವನು ಹೇಳಿದ. ಗ್ರಾಹಕನಿಗೆ ಅದ್ಯಾವುದೋ ಸಮಾರಂಭಕ್ಕಾಗಿ ಕುವೆಂಪು ತರಹ ಕಾಣಿಸಿಕೊಳ್ಳುವ ಜರೂರಿತ್ತು. ಕೊನೆಗೆ ಸಣ್ಣದೊಂದು ಚರ್ಚೆಯ ನಂತರ ಕೂದಲಿಗೆ ಮೊದಲು ಬಿಳಿ ಬಣ್ಣ ಹಾಕುವುದು ನಿಶ್ಚಯವಾಯಿತು. ಕರ್ಲ್ ಮಾಡುವುದನ್ನು ಆಮೇಲೆ ನೋಡೋಣ ಎನ್ನುವ ಒಪ್ಪಂದ. ತನ್ನ ಕೂದಲಿಗೆ ಬಿಳಿ ಬಣ್ಣ ಮೆತ್ತಿದ್ದೇ ಇಪ್ಪತ್ತೈದು ಕೂಡ ದಾಟದ ಹುಡುಗನಿಗೆ ಪರಮಾನಂದ. ಕನ್ನಡಿಯ ಎದುರು ಹಲವು ಭಂಗಿಗಳಲ್ಲಿ ನೋಡಿಕೊಂಡಿದ್ದೇ ನೋಡಿಕೊಂಡಿದ್ದು. ಆಮೇಲೆ ಅಬ್ದುಲ್ ಕಲಾಂ ಅವರದ್ದೊಂದು ಫೋಟೊ ಗಮನಿಸಿದ ಸಲೂನಿನವ, ಅವರಂತೆಯೇ ಗ್ರಾಹಕನ ತಲೆಯ ಮಧ್ಯಕ್ಕೆ ಬೈತಲೆ ತೆಗೆದದ್ದಾಯಿತು. ಕೊನೆಗೂ ಗುಂಗುರು ಕೂದಲನ್ನು ಆ ಕ್ಷಣಕ್ಕೆ ಮೂಡಿಸಿದ ಮೇಲೆ ಗ್ರಾಹಕನಿಗೆ ತಾನು ತಾತ್ಕಾಲಿಕ ಕುವೆಂಪು ಆಗಿಬಿಟ್ಟ ಸಂಭ್ರಮ.

'ಇಷ್ಟಕ್ಕೂ ಕುವೆಂಪು ಬರೆದ ಕಾದಂಬರಿ ಯಾವುದು?' ಎಂದು ಅಲ್ಲೇ ಇದ್ದ ಪರಿಚಯಸ್ಥರೊಬ್ಬರು ಅವನನ್ನು ಕೆಣಕಿದರು. 'ಕಾದಂಬರಿ ಗೊತ್ತಿಲ್ಲ... ಭಾರತ ಜನನಿಯ ತನುಜಾತೆ, ಹುಟ್ಟಿದರೆ ಕನ್ನಡ ನಾಡಲ್